

'ಇಂದಿನ ಮಕ್ಕಳು ಇಂದಿನ ಪ್ರಜೆಗಳು'

# "ಮಕ್ಕಳೋತ್ಸವ-2009"

ಶಾಲಾ ಮಕ್ಕಳಿಗೆ, ಎಸ್‌ಡಿಎಂಸಿ ಸದಸ್ಯರಿಗೆ, ಗ್ರಾಮ ಪಂಚಾಯಿತಿ ಸದಸ್ಯರಿಗೆ, ಪೋಷಕರಿಗೆ ಮತ್ತು ಸಮಯದಾಯದವರಿಗೆ **"ಮಕ್ಕಳ ಹಕ್ಕುಗಳ"** ಕುರಿತು ಜಾಗೃತಿ ಮೂಡಿಸಿ ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸುವಂತೆ ಮಾಡುವ ವಿವಿಧ ವಿಭಿನ್ನ ಕಾರ್ಯಕ್ರಮಗಳೇ **"ಮಕ್ಕಳೋತ್ಸವ"**

## ಏನಿದು ಮಕ್ಕಳ ಹಕ್ಕು ?

- ☞ ಸಂವಿಧಾನ್ಮಕವಾಗಿ ಮಕ್ಕಳಿಗೆ ಸಿಗಬೇಕಾದ, ಅವಶ್ಯಕವಾದ, ಅಗತ್ಯವಾದ, ಅನುಭವಿಸಬೇಕಾದ ಅಂಶಗಳೇ **'ಮಕ್ಕಳು ಹಕ್ಕು'**.
- ☞ 1989ರ ನವೆಂಬರ್ 20 ರಂದು ವಿಶ್ವಸಂಸ್ಥೆ ಅಂಗೀಕಾರ ಮಾಡಿ ಅನುಷ್ಠಾನಕ್ಕೆ ತಂದಂತೆ **"ಮಕ್ಕಳ ಹಕ್ಕುಗಳ ಒಡಂಬಡಿಕೆ"** ಗೆ ಭಾರತ 1992 ಡಿಸೆಂಬರ್ 11 ರಂದು ಸಹಿ ಮಾಡಿ **18 ವರ್ಷದೊಳಗಿನವರನ್ನೆಲ್ಲಾ "ಮಗು" ಅಥವಾ "ಮಕ್ಕಳು"** ಎಂದು ಒಪ್ಪಿಕೊಂಡಿದೆ.
- ☞ ಈ ಒಡಂಬಡಿಕೆ ಜಗತ್ತಿನ 196 ರಾಷ್ಟ್ರಗಳು ಈಗಾಗಲೇ ಸಹಿ ಮಾಡಿ ಅನುಷ್ಠಾನಕ್ಕೆ ತರುತ್ತಿವೆ.
- ☞ ಈ ಒಡಂಬಡಿಕೆಯಲ್ಲಿ 54 ಅಂಶಗಳನ್ನು (ಲೇಖನ) ಮಕ್ಕಳ ಸಮಗ್ರ ಅಭಿವೃದ್ಧಿಗೆ ಪ್ರತಿಯೊಂದು ರಾಷ್ಟ್ರ ಅನುಷ್ಠಾನ ಮಾಡಲೇಬೇಕಾದ ಮಕ್ಕಳಿಗೆ ನೀಡಲೇಬೇಕಾದ ಅಂಶಗಳನ್ನು (ಹಕ್ಕುಗಳನ್ನು) ಹೇಳಿದೆ.

## ಮಕ್ಕಳ ಒಡಂಬಡಿಕೆ ಪ್ರಕಾರ ಮಕ್ಕಳ ಪ್ರಮುಖ ಹಕ್ಕುಗಳು

**1. ಬದುಕುವ ಹಕ್ಕು　　2. ರಕ್ಷಣೆಯ ಹಕ್ಕು**

**3. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು**

**4. ಭಾಗವಹಿಸುವ ಹಕ್ಕು**



- ☞ **14 ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ ರೂ. 20 ಸಾವಿರ ದಂಡ ಮತ್ತು ಒಂದು ವರ್ಷ ಜೈಲು.**
- ☞ **18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಹಾಗೂ 21 ವರ್ಷದೊಳಗಿನ ಗಂಡು ಮಕ್ಕಳಿಗೆ "ಮದುವೆ" ಮಾಡುವುದು ಮತ್ತು ಮಾಡಿಸುವುದು ಶಿಕ್ಷಾರ್ಹ ಅಪರಾಧ.**
- ☞ **ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆ ಮತ್ತು ಮಾರಾಟ ಮಾಡಿದಲ್ಲಿ ಶಿಕ್ಷೆ ತಪ್ಪಿದ್ದಲ್ಲ.**

**18 ವರ್ಷದೊಳಗಿನ ಎಲ್ಲಾ ಮಕ್ಕಳು ಕನಿಷ್ಠ 10ನೇ ತರಗತಿ ತನಕ "ಶಾಲಾಶಿಕ್ಷಣ" ಪಡೆಯುವಂತೆ ಹಾಗೂ ಮಕ್ಕಳು ಶಾಲೆ ಬಿಡದಂತೆ ಪ್ರತಿಯೊಬ್ಬ ನಾಗರಿಕರು ಕಾರ್ಯಪ್ರವೃತ್ತರಾಗಿ.**

ಕರ್ನಾಟಕ ಸರ್ಕಾರ

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

ಕರ್ನಾಟಕ ರಾಜ್ಯ ಪೊಲೀಸ್

ದುಡಿಮೆ ಬೇಡ
ಶಿಕ್ಷಣ ಬೇಕು

unicef

## ಭಾರತದ ಸಂವಿಧಾನ ಪ್ರಕಾರ ಮಕ್ಕಳ ಹಕ್ಕುಗಳು

ಪ್ರೀತಿ, ವಾತ್ಸಲ್ಯ, ಬಾಲ್ಯ, ವಿಶ್ವಾಸ, ರಕ್ಷಣೆ, ಪೋಷಣೆ, ಆರೋಗ್ಯ, ಸಮಾನತೆ, ಸ್ವಾತಂತ್ರ್ಯ, ಆಟಪಾಠ, ಭಾಗವಹಿಸುವುದು, ಅಭಿಪ್ರಾಯ, ಮೆಚ್ಚುಗೆ, ಪೌಷ್ಠಿಕ ಆಹಾರ, ವಸತಿ, ಶಿಕ್ಷಣ, ಮನರಂಜನೆ, ಅವಕಾಶ, ಸಂತೋಷ, ಸ್ನೇಹ ಇತ್ಯಾದಿ.

## ನಿಮಗೆ ತಿಳಿದಿರಲಿ

1. 1986ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯಿದೆ ಪ್ರಕಾರ ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರಿಗೆ 10 ಸಾವಿರ ದಂಡ ಮತ್ತು ಒಂದು ವರ್ಷ ಜೈಲು (ಮನೆ ಕೆಲಸ ಸೇರಿದಂತೆ).
2. 1996 ರ ಸುಪ್ರೀಂಕೋರ್ಟ್ ತೀರ್ಪು ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರು 20 ಸಾವಿರ ದಂಡ ತೆರಬೇಕು ಹಾಗೂ ಸರಕಾರ ರೂ. 5,000/- ದಂಡ ನೀಡಿ, ರೂ. 25,000/- ವನ್ನು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಠೇವಣಿ ಇಟ್ಟು ಅದರ ಬಡ್ಡಿದರದಲ್ಲಿ ಮಗುವಿಗೆ ಶಿಕ್ಷಣ ನೀಡತಕ್ಕದ್ದು.
3. 1997ರ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಕಾರ 12 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾವುದೇ ಕ್ಷೇತ್ರದಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.
4. 1961ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಮಕ್ಕಳ ಕೆಲಸ ನಿಷೇಧ.
5. ಕರ್ನಾಟಕ ನಾಗರೀಕ ಸೇವಾ (ನಡವಳಿಕೆ) ಕಾಯ್ದೆ 1966ರ ನಿಯಮ 29ಎ :- ಸರ್ಕಾರಿ ನೌಕರರು 14 ವರ್ಷದೊಳಗಿನ ಮಕ್ಕಳನ್ನು ಮನೆಕೆಲಸಕ್ಕೆ ನೇಮಿಸುವುದು ಶಿಕ್ಷಾರ್ಹ ಅಪರಾಧ.
6. 2000ನೇ ಇಸವಿಯ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ. ಈ ಕಾಯ್ದೆ ಪ್ರಕಾರ 18 ವರ್ಷದೊಳಗಿನ ಮಕ್ಕಳನ್ನು ಶೋಷಣೆ, ದೌರ್ಜನ್ಯ, ಹಿಂಸೆ, ದಬ್ಬಾಳಿಕೆ, ಲೈಂಗಿಕ ಕಿರುಕುಳ, ಅವರ ಅಭಿಪ್ರಾಯಕ್ಕೆ ಧಕ್ಕೆ, ಸ್ವಾತಂತ್ರ್ಯಕ್ಕೆ ಧಕ್ಕೆ, ಒತ್ತಡ ಹೇರುವುದು. ಬಲಾತ್ಕಾರ ಮತ್ತು ಅವರ ಇಚ್ಛಾಶಕ್ತಿಯ ವಿರುದ್ಧ ಒತ್ತಡ ಹೇರುವುದು ನಿಷೇಧ.

## ನಿಮಗೆ ಗೊತ್ತಿದೆಯೇ ?

1. ಸಂವಿಧಾನ ಲೇಖನ 21ರ ಪ್ರಕಾರ ಎಲ್ಲರಿಗೂ ಬದುಕುವ ಹಕ್ಕು ಇದೆ.
2. ಸಂವಿಧಾನದ ಲೇಖನ 21ಎ ಪ್ರಕಾರ 6-14 ವರ್ಷದೊಳಗಿನ ಮಕ್ಕಳಿಗೆ **"ಶಿಕ್ಷಣ ಮೂಲಭೂತ ಹಕ್ಕು"** (2003 ಮಾರ್ಚ್‌ನಲ್ಲಿ ಸಂವಿಧಾನದಲ್ಲಿ ತಿದ್ದುಪಡಿಯಾದಂತೆ).
3. ಸಂವಿಧಾನ ಲೇಖನ 34ರ ಪ್ರಕಾರ ಪೋಷಕರು ಕುಟುಂಬ ನಡೆಸಲು ಮಕ್ಕಳನ್ನು ಬಳಸಬಾರದು.
4. ಸಂವಿಧಾನ ಲೇಖನ 45ರ ಪ್ರಕಾರ ಎಲ್ಲಾ ಮಕ್ಕಳಿಗೆ ಆರು ವರ್ಷ ತುಂಬುವವರೆಗೆ ಶಿಶು ಆರೈಕೆ ಮತ್ತು ಪ್ರಾಥಮಿಕ ಪೂರ್ವ ಶಿಕ್ಷಣ ಕಡ್ಡಾಯವಾಗಿ ನೀಡಬೇಕು.
5. 1976ರ ಜೀತ ಪದ್ಧತಿ ನಿರ್ಮೂಲನ ಕಾಯ್ದೆ ಪ್ರಕಾರ ಯಾವುದೇ ಮಕ್ಕಳನ್ನು ನಾಗರಿಕರನ್ನು ಜೀತಕ್ಕೆ / ಸಂಬಳಕ್ಕೆ ಇಡುವಂತಿಲ್ಲ.

## ಮಕ್ಕಳ ಹಕ್ಕುಗಳ ಒಡಂಬಡಿಕೆಯ 54 ಪರಿಚ್ಛೇಧಗಳಲ್ಲಿ ಕೆಲವು ಮುಖ್ಯ ಮಕ್ಕಳ ಹಕ್ಕುಗಳು ಹೀಗಿವೆ...

- **ಲೇಖನ 1** : 18 ವರ್ಷದೊಳಗಿನ ಎಲ್ಲಾ ಮನುಷ್ಯ ಜೀವಗಳು ಮಕ್ಕಳು.
- **ಲೇಖನ 2** : ಮಕ್ಕಳಲ್ಲಿ ಯಾವುದೇ ತಾರತಮ್ಯ ತರಬಾರದು.
- **ಲೇಖನ 6** : ಪ್ರತಿ ಮಗುವಿಗೂ ಜೀವಿಸುವ ಹಕ್ಕಿದೆ.
- **ಲೇಖನ 11** : ಯಾವುದೇ ಮಗುವನ್ನು ಸರ್ಕಾರದ ಮತ್ತು ಪೋಷಕರ ಅನುಮತಿ ಇಲ್ಲದೆ ಸ್ಥಳಾಂತರ ಮಾಡುವಂತಿಲ್ಲ.
- **ಲೇಖನ 12** : ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು.
- **ಲೇಖನ 13** : ಮಾಹಿತಿ ಪಡೆಯುವ ಹಕ್ಕು.
- **ಲೇಖನ 15** : ಸಂಘಟಕರಾಗುವ ಹಕ್ಕು.
- **ಲೇಖನ 19** : ದುರುಪಯೋಗದಿಂದ ರಕ್ಷಣೆಯ ಹಕ್ಕು.
- **ಲೇಖನ 22** : ನಿರಾಶ್ರಿತ ಮತ್ತು ನಿರ್ವಸಿತರಾಗುವುದರಿಂದ ರಕ್ಷಣೆಯ ಹಕ್ಕು.
- **ಲೇಖನ 23** : ವಿಶೇಷ ಅಗತ್ಯತೆಯನ್ನ (ಅಂಗವಿಕಲತೆ / ಬುದ್ಧಿಮಾಂದ್ಯ) ವಿಶೇಷ ರಕ್ಷಣೆಯ ಮತ್ತು ಸೌಲಭ್ಯದ ಹಕ್ಕು.
- **ಲೇಖನ 24** : ಉತ್ತಮ ಆರೋಗ್ಯ ಹೊಂದುವ ಹಕ್ಕು.
- **ಲೇಖನ 28** : ಶಿಕ್ಷಣದ ಹಕ್ಕು.
- **ಲೇಖನ 31** : ಭಾಗವಹಿಸುವ ಹಕ್ಕು.
- **ಲೇಖನ 32** : ಬಾಲಕಾರ್ಮಿಕ ಪದ್ಧತಿ ನಿಷೇಧ / ಅದರ ವಿರುದ್ಧ ರಕ್ಷಣೆಯ ಹಕ್ಕು.
- **ಲೇಖನ 33** : ಮಾದಕ ದ್ರವ್ಯಗಳಿಂದ ದೂರ ಮತ್ತು ರಕ್ಷಣೆಯ ಹಕ್ಕು.
- **ಲೇಖನ 34** : ಲೈಂಗಿಕ ಶೋಷಣೆಯಿಂದ ರಕ್ಷಣೆಯ ಹಕ್ಕು.
- **ಲೇಖನ 35** : ಮಕ್ಕಳ ಮಾರಾಟ, ಅಕ್ರಮ ಬಂಧನದ ವಿರುದ್ಧ ರಕ್ಷಣೆ ಮತ್ತು ಕ್ರಮ.
- **ಲೇಖನ 36** : ಎಲ್ಲಾ ರೀತಿಯ ಶೋಷಣೆ, ವಲಸೆ ದಬ್ಬಾಳಿಕೆಯಿಂದ ರಕ್ಷಣೆ.
- **ಲೇಖನ 37** : ಚಿತ್ರಹಿಂಸೆ / ಮರಣ ದಂಡನೆ ನೀಡುವಂತಿಲ್ಲ ಇದರಿಂದ ರಕ್ಷಣೆ.
- **ಲೇಖನ 38** : ಯುದ್ಧ / ಸಶಸ್ತ್ರ ಸಂಘರ್ಷದಿಂದ ರಕ್ಷಣೆ.

**"ಮಕ್ಕಳನ್ನು ದುಡಿಸುವುದರಿಂದ ಯಾವುದೇ ಬಡಕುಟುಂಬ ಉದ್ಧಾರವಾಗಿಲ್ಲ. ಬದಲಾಗಿ ಮತ್ತೆ ಬಡತನಕ್ಕೆ ಬಂದಿದೆ. ಮಕ್ಕಳನ್ನು ದುಡಿಸುವುದರಿಂದ ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆ ಜಾಸ್ತಿಯಾಗುತ್ತಿದೆ ಎಂಬ ಸತ್ಯ ನಿಮಗೆ ತಿಳಿದಿರಲಿ".**

**ಪ್ರಕಟಣೆ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಯುನಿಸೆಫ್ 'ಮಕ್ಕಳ ಸಂರಕ್ಷಣಾ' ಯೋಜನೆ, ರಾಯಚೂರು, ಜಿಲ್ಲಾಧಿಕಾರಿಗಳ ಕಚೇರಿ, ರಾಯಚೂರು.**
**ದೂರವಾಣಿ : 08532-229011 ಪೊಲೀಸ್ ಕಂಟ್ರೋಲ್ ರೂಂ : 235100**